ಈ) ಕೇಂದ್ರ ಸರ್ಕಾರ ಬೆಳಗಾವಿ ಜಿಲ್ಲೆ ಸವದತ್ತಿ ತಾಲ್ಲೂಕಿನ ತನಿಕೊಳ್ಳ ಹಾಗೂ ಶ್ರೀ ಕ್ಷೇತ್ರ ಸೊಗಲದಲ್ಲಿ ಹೊನಲು-ಬೆಳಕು ಯೋಜನೆಯ ಪ್ರಸ್ತಾವನೆಗಳನ್ನು ಕಳುಹಿಸುವಂತೆ ರಾಜ್ಯ ಸರ್ಕಾರಕ್ಕೆ ಕೋರಿದರೂ ಕೇಂದ್ರ ಸರ್ಕಾರಕ್ಕೆ ಕಳುಹಿಸಲು ಹಿಂದೇಟು ಹಾಕುತ್ತಿರುವ ಸಂಗತಿ ಸರ್ಕಾರದ ಗಮನಕ್ಕೆ ಬಂದಿದೆಯೇ;

ಉ) ಹಾಗಿದ್ದಲ್ಲಿ, ಶ್ರೀ ಕ್ಷೇತ್ರ ಸೊಗಲ, ತನಿಕೊಳ್ಳದ ಮಲಪ್ರಭಾ ನದಿ ದಂಡೆಯ ಮೇಲೆ ಇರುವ ಗಂಗಾಂಭಿಕಾ ಸ್ಥಳಗಳಲ್ಲಿ ಹೊನಲು ಬೆಳಕು ಯೋಜನೆಯ ಪ್ರಸ್ತಾವನೆಗಳನ್ನು ಕೇಂದ್ರ ಸರ್ಕಾರಕ್ಕೆ ಕಳುಹಿಸಲು ಕ್ರಮ ಕೈಗೊಳ್ಳಲಾಗುವುದೇ?

ಶ್ರೀ ಡಿ.ಬಿ. ಇನಾಂದಾರ್ (ಪ್ರವಾಸೋದ್ಯಮ ಮತ್ತು ಮಾಹಿತಿ ತಂತ್ರಜ್ಞಾನ ರಾಜ್ಯ ಸಚಿವರು):

ಅ) ಎಂಟು.

ಆ) ರೂ. 287.49 ಲಕ್ಷಗಳು

1.	ಕೊಕ್ಕರೆ ಬೆಳ್ಳೂರು ಪಕ್ಷಿಧಾಮ ಅಭಿವೃದ್ಧಿ	ರೂ. 50.00 ಲಕ್ಷ
2.	ಬೆಂಗಳೂರಿನ ಬಸವನಗುಡಿಯಲ್ಲಿರುವ ಬ್ಯೂಗಲ್ ರಾಕ್ ಗಾರ್ಡನ್ ಸೌಂದರೀಕರಣ	ರೂ. 40.00 ಲಕ್ಷ
3.	ಉತ್ತರ ಕನ್ನಡ ಜಿಲ್ಲೆಯಲ್ಲಿರುವ ಠ್ಯಾಗೂರ್ ಕಡಲು ತೀರ ಅಭಿವೃದ್ಧಿ	ರೂ. 197.49 ಲಕ್ಷ
		ರೂ. 287.49 ಲಕ್ಷ

ಇ) ಇಲ್ಲ

ಈ) ಇಲ್ಲ.

ಉ) ಹೌದು.

ಮೇಲುಕೋಟೆ ಚಲುವನಾರಾಯಣಸ್ವಾಮಿ ದೇವಸ್ಥಾನ

2237 (2379) ಶ್ರೀ ಕೃಷ್ಣಮೂರ್ತಿ ಕೆ.ಎಂ. (ಕಡೂರು): ಮಾನ್ಯ ಮುಜರಾಯಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಮಂಡ್ಯ ಜಿಲ್ಲೆಯ ಮೇಲುಕೋಟೆ ಚಲುವನಾರಾಯಣ ಸ್ವಾಮಿ ದೇವಸ್ಥಾನದಲ್ಲಿ 1955 ರಿಂದ ಇದುವರೆಗೂ ಲೆಕ್ಕ ಪರಿಶೋಧನೆಯಾಗಿ ಸುಮಾರು 50 ಲಕ್ಷಕ್ಕೂ ಹೆಚ್ಚು ಹಣ ದುರುಪಯೋಗವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ, ಏನು ಕ್ರಮ ಕೈಗೊಂಡಿದೆ;

ಆ) ಸದರಿ ದೇವಸ್ಥಾನದ ಒಂದೇ ಕುಟುಂಬದ ಎಷ್ಟು ಜನ ಅರ್ಚಕರಿದ್ದಾರೆ, ಅರ್ಚಕರ ನೇಮಕಾತಿಗಳಿಗೆ ನೇಮಕಾತಿ ನಿಯಮ ಪಾಲಿಸಿದೆಯೆ ಮತ್ತು ಬರಾಬರ್ದ ಪದ್ಧತಿಯ ಮರು ನೇಮಕಾತಿ ಸಂದರ್ಭದಲ್ಲಿ ಕ್ರಿಮಿನಲ್ ಅಪರಾಧಿಗಳನ್ನು ನೇಮಕ ಮಾಡಿಕೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ದೇವಸ್ಥಾನದಲ್ಲಿರುವ ಅನಧಿಕೃತ ನೌಕರರು ಕರ್ತವ್ಯ ನಿರ್ವಹಿಸುತ್ತಿರುವುದು ಮತ್ತು ವೇತನ ಪರಿಷ್ಕರಣೆಯ ತಾರತಮ್ಯ ಸರ್ಕಾರದ ಗಮನಕ್ಕೆ ಬಂದಿದೆಯೇ?

ಶ್ರೀಮತಿ ಸುಮಾ ವಸಂತ್ (ಮುಜರಾಯಿ ರಾಜ್ಯ ಸಚಿವರು):

ಅ) ಮೇಲುಕೋಟೆ ಶ್ರೀ ಚೆಲುವನಾರಾಯಣಸ್ವಾಮಿ ದೇವಾಲಯದಲ್ಲಿ 1955ನೇ ಸಾಲಿನಿಂದ 2001-2002ನೇ ಸಾಲಿನ ಲೆಕ್ಕ ತನಿಖಾ ವರದಿಯಲ್ಲಿ ಒಟ್ಟು ರೂ. 4,66,045-70ಗಳು ವಸೂಲಾತಿಗೆ ಸೂಚಿಸಿದ್ದು, ಈ ಪೈಕಿ ರೂ. 2,15,095-95 ವಸೂಲಾಗಿರುತ್ತದೆ. ರೂ. 2,50,950-70 ವಸೂಲಾತಿಗೆ ಬಾಕಿ ಇರುತ್ತದೆ. ಈ ಬಗ್ಗೆ ಆಡಿಟ್ ವರದಿಗಳಿಗೆ ಅನುವರ್ತನಾ ವರದಿಯನ್ನು ಕಳುಹಿಸಲಾಗಿದೆ. ಆಕ್ಷೇಪಣೆ ಹಾಗೂ ವಸೂಲಾತಿ ಮೊತ್ತಗಳ ಬಗ್ಗೆ ವಸೂಲಾತಿಗೆ ಕ್ರಮ ಜರುಗಿಸಲಾಗಿದೆ.

ಆ) ಶ್ರೀ ನಾರಾಯಣಸ್ವಾಮಿ ದೇವಾಲಯದಲ್ಲಿ ಒಂದೇ ಕುಟುಂಬಕ್ಕೆ ಸೇರಿದ 3 ಜನ ಅರ್ಚಕರು ಇರುತ್ತಾರೆ. ದೇವಾಲಯದ (1) ನಾರಾಯಣಸ್ವಾಮಿ ಸನ್ನಿದಿಯ ಅರ್ಚಕರ ವೃತ್ತಿಯ ಬರಾಬರ್ದೆ ಹುದ್ದೆ ಆಗಿರುತ್ತದೆ. ನಿಯಮಾನುಸಾರ ಅರ್ಚಕರ ನೇಮಕಾತಿ ಆಗಿರುತ್ತದೆ. ಬರಾಬರ್ದೆ ಪದ್ಧತಿಯ ಮರು ನೇಮಕಾತಿ ಸಂದರ್ಭದಲ್ಲಿ ಕ್ರಿಮಿನಲ್ ಅಪರಾಧಿಗಳನ್ನು ನೇಮಕ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿಲ್ಲ.

ಇ) ದೇವಾಲಯದಲ್ಲಿ ಯಾವುದೇ ಅನಧಿಕೃತ ವ್ಯಕ್ತಿಗಳು ಕೆಲಸ ನಿರ್ವಹಿಸುತ್ತಿರುವುದಿಲ್ಲ. ನಿಯಮಾನುಸಾರ ಅನುಮತಿ ಪಡೆದು ಕರ್ತವ್ಯ ನಿರ್ವಹಿಸುತ್ತಿರುತ್ತಾರೆ. ವೇತನ ಪರಿಷ್ಕರಣೆ ಸರ್ಕಾರದಿಂದ ಮಂಜೂರಾತಿ ಪಡೆಯಲಾಗಿದೆ. ಹುದ್ದೆ ಮತ್ತು ಜವಾಬ್ದಾರಿಗೆ ಅನುಗುಣವಾಗಿ ವೇತನ ನಿಗಧಿಪಡಿಸಲಾಗಿದೆ.

ಲೋಕೋಪಯೋಗಿ ಇಲಾಖೆಯಲ್ಲಿ ದಿನಗೂಲಿ ನೌಕರರನ್ನು ಖಾಯಂಗೊಳಿಸುವುದು

2238 (2658) ಶ್ರೀ ಲಕ್ಷ್ಮೀನಾರಾಯಣ ಎಂ.ಡಿ. (ಅಣ್ಣಯ್ಯ) (ತುರುವೇಕೆರೆ): ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿ ಲೋಕೋಪಯೋಗಿ ಇಲಾಖೆಯಲ್ಲಿ ದಿನಗೂಲಿ ನೌಕರರು ಎಷ್ಟು ಜನ ಇರುವರು;

ಆ) ಹಾಗಿದ್ದಲ್ಲಿ, ಸುಮಾರು ವರ್ಷಗಳಿಂದ ಸೇವೆ ಸಲ್ಲಿಸುತ್ತಿರುವ ಈ ನೌಕರರ ಬಗ್ಗೆ ಸರ್ಕಾರ ಗಮನ ಹರಿಸದಿರಲು ಕಾರಣವೇನು;

ಇ) ಇವರಲ್ಲಿ ಖಾಯಂಗೊಳಿಸಲು ಎಷ್ಟು ಜನ ನ್ಯಾಯಾಲಯದ ಮೊರೆ ಹೋಗಿದ್ದಾರೆ;

ಈ) ನ್ಯಾಯಾಲಯದ ಆದೇಶದಂತೆ ಎಷ್ಟು ಜನರನ್ನು ಕೆಲಸಕ್ಕೆ ತೆಗೆದುಕೊಳ್ಳಲಾಗಿದೆ;

ಉ) ಎಲ್ಲರಿಗೂ ಒಂದೇ ಆದೇಶದ ಮೇರೆಗೆ ಸಮಾನತೆ ಕಾಪಾಡಲಾಗುವುದೇ;

ಊ) ಈ ವರ್ಷ ಎಲ್ಲರನ್ನೂ ಖಾಯಂಗೊಳಿಸಲಾಗುವುದೇ?

ಶ್ರೀ ಧರ್ಮಸಿಂಗ್ (ಲೋಕೋಪಯೋಗಿ ಸಚಿವರು):

ಅ) ದಿನಾಂಕ 1-7-84ರ ನಂತರ ನೇಮಕಾತಿ ಹೊಂದಿರುವ 1092 ದಿನಗೂಲಿ ನೌಕರರು ಇದ್ದಾರೆ.

ಆ) ದಿನಾಂಕ 1-7-84ರ ನಂತರ ನೇಮಕಾತಿ ಹೊಂದಿದ ದಿನಗೂಲಿ ನೌಕರರ ಸಕ್ರಮಾತಿ ವಿಷಯವನ್ನು ಸರ್ವೋನ್ನತ ನ್ಯಾಯಾಲಯದ ಮುಂದಿದೆ. ಇವರ ಸಕ್ರಮಾತಿಯನ್ನು ಸರ್ವೋನ್ನತ ನ್ಯಾಯಾಲಯವು ನೀಡುವ ತೀರ್ಪನ್ನು ಅವಲಂಭಿಸಿರುತ್ತದೆ.